# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಿನಾಂಕ : 01-10-2020

## -: ಸಭಾ ಟಿಪ್ಪಣಿ:-

**ವಿಷಯ:** ದಿನಾಂಕ : 03.10.2020 ರಂದು ವಾರ್ಡ್ ಸಂಖ್ಯೆ : 29-ಕಾಚರಕನಹಳ್ಳಿಯ ಕುಂದು ಕೊರತೆಗಳು ಹಾಗೂ ವಾರ್ಡಿನ ಅಭಿವೃದ್ಧಿ ಕಾಮಗಾರಿ ಕಾರ್ಯಗಳ ಕುರಿತು ಚರ್ಚಿಸುವ ಬಗ್ಗೆ.

**ಉಲ್ಲೇಖ:** 1. ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಕಛೇರಿ ಆದೇಶ ಸಂಖ್ಯೆ : ಬಿ12(5)ಪಿ.ಆರ್/35/2020-21, ದಿ : 21.09.2020

************

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ :29, ಕಾಚರಕನಹಳ್ಳಿ ಸಂಬಂಧಿಸಿದಂತೆ ಕುಂದು ಕೊರತೆಗಳು ಹಾಗೂ ವಾರ್ಡಿನ ಅಭಿವೃದ್ಧಿ ಕಾಮಗಾರಿ ಕಾರ್ಯಗಳ ಬಗ್ಗೆ ಚರ್ಚಿಸಲು ದಿನಾಂಕ : 03.10.2020 ರಂದು ಬೆಳ್ಳಿಗೆ 10.00 ಗಂಟೆಗೆ ವಾರ್ಡ್ ಸಂಖ್ಯೆ : 29ರ, ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಕುವೆಂಪು ಉದ್ಯಾನವನ, 7ನೇ ಅಡ್ಡ ರಸ್ತೆಯಲ್ಲಿನ ಬಿ.ಬಿ.ಎಂ.ಪಿ ಕಟ್ಟಡದ ಸಭಾಂಗಣದಲ್ಲಿ ಸಭೆಯನ್ನು ನಡೆಸಲಾಗುತ್ತಿದ್ದು, ಸದರಿ ಸಭೆಗೆ ಹಾಜರಾಗಲು ಈ ಮೂಲಕ ಕೋರಲಾಗಿದೆ.

**ಸಭೆಗೆ ಸಂಬಂಧಿಸಿದ ವಿಷಯ ಸೂಚಿಗಳು ಈ ಕೆಳಕಂಡಂತಿರುತ್ತದೆ.**

1. ವಾರ್ಡಿನ ವಿವಿಧ ಬಡಾವಣೆಗಳ ಅಭಿವೃದ್ಧಿ ಕಾರ್ಯಗಳ ಬಗ್ಗೆ.
2. ವಾರ್ಡಿನ ಘನತ್ಯಾಜ್ಯ ನಿರ್ವಹಣೆಯ ಬಗ್ಗೆ.
3. ಕಂದಾಯ ಇಲಾಖೆಗೆ ಸಂಬಂಧಿಸಿದ ಬಗ್ಗೆ.
4. ನೀರು ಸರಬರಾಜು ಮತ್ತು ಒಳಚರಂಡಿಗೆ (**BWSSB**) ಸಂಬಂಧಿಸಿದ ವಿಷಯಗಳ ಬಗ್ಗೆ.
5. ವಿದ್ಯುತ್ ಸರಬರಾಜು (**Bescom**) ಸಂಬಂಧಿಸಿದ ವಿಷಯಗಳ ಬಗ್ಗೆ.
6. ಉದ್ಯಾನವನ ಮತ್ತು ಬೀದಿ ದೀಪ ನಿರ್ವಹಣೆಯ ಕುರಿತು.
7. Traffic issues and Law and Order issued.

01/10/2020

ಕಾರ್ಯದರ್ಶಿಗಳು ಮತ್ತು ಸಂಚಾಲಕರು
ವಾರ್ಡ್ ಸಂಖ್ಯೆ : 29
ಕಾಚರಕನಹಳ್ಳಿ

ರವರಿಗೆ,

1. ಶ್ರೀ.ಆಂಜನೇಯಲು, ಬಿನ್ ಶ್ರೀ.ಟಿ.ಬಿನ್ ಚಿನ್ನಾಲಯ್ಯ, ಸದ್ಯರು, ನಂ.80, ಕೀರ್ತಿ ಲೇಔಟ್, ಕಮ್ಮನಹಳ್ಳಿ, ಬೆಂಗಳೂರು.
2. ಶ್ರೀ.ಟಿ.ನಾಗರಾಜ, ನಂ.13/2, ಲಕ್ಷ್ಮಯ್ಯ ರೆಡ್ಡಿ ಲೇಔಟ್, 2ನೇ ಮುಖ್ಯ ರಸ್ತೆ, ಕಾಚರಕನಹಳ್ಳಿ, ಬೆಂಗಳೂರು.
3. ಶ್ರೀಮತಿ.ಸರಸ್ವತಿ, ನಂ.35, ಜಲವಾಯು ವಿಹಾರ, ಬೆಂಗಳೂರು.
4. ಶ್ರೀಮತಿ.ವಿನುತ.ಎ, ನಂ.228, 1ನೇ ಡಿ ಅಡ್ಡ ರಸ್ತೆ, ಹೆಚ್.ಆರ್.ಬಿ.ಆರ್ ಬಡಾವಣೆ, 3ನೇ ಬ್ಲಾಕ್, ಜ್ಯೋತಿ ಶಾಲೆ ಹಿಂಭಾಗ ಸೆಂಟ್ ಥಾಮಸ್ ಟೌನ್, ಬೆಂಗಳೂರು.

(ಮ.ತಿ.ನೋ)...

5. ಶ್ರೀಮತಿ.ಕೆ.ಲೀಲಾವತಿ, ನಂ.14, 1ನೇ ಅಡ್ಡ ರಸ್ತೆ, 3ನೇ ಮುಖ್ಯ ರಸ್ತೆ, ಕಮ್ಮನಹಳ್ಳಿ, ರಾಮಯ್ಯ ಬಡಾವಣೆ, ಸೇಂಟ್ ಥಾಮಸ್ ಟೌನ್, ಬೆಂಗಳೂರು.
6. ಅಧ್ಯಕ್ಷರು ಜಲವಾಯು ವಿಹಾರ್ ಅಪಾರ್ಟ್‌ಮೆಂಟ್ಸ್ ಓನರ್ಸ್ ಅಸೋಸಿಯೇಷನ್, ನಂ.ಸಿ-275, ಜಲವಾಯು ವಿಹಾರ್, ಕಮ್ಮನಹಳ್ಳಿ ಮುಖ್ಯ ರಸ್ತೆ, ಮರಿಯಪ್ಪ ಸರ್ಕಲ್, ಕಮ್ಮನಹಳ್ಳಿ, ಬೆಂಗಳೂರು.
7. ಅಧ್ಯಕ್ಷರು, ರೆಸಿಡೆಂಟ್ಸ್ ಸೋಷಿಯಲ್ ಫೋರಂ, ನಂ.303, 1ನೇ ಸಿ ಕ್ರಾಸ್, ಹೆಚ್.ಆರ್.ಬಿ.ಆರ್ ಬಡಾವಣೆ, ಕಮ್ಮನಹಳ್ಳಿ, ಬೆಂಗಳೂರು.
8. ಶ್ರೀ.ಪಿ.ವಿ ರಮಣಯ್ಯ ಬಿನ್ ಶ್ರೀ.ವೆಂಕಟಸುಬ್ಬಯ್ಯ, ನಂ.01, 2ನೇ ಅಡ್ಡ ರಸ್ತೆ, ಆಯಿಲ್ ಮಿಲ್ ರಸ್ತೆ, ಅರವಿಂದ್‌ನಗರ, ಬೆಂಗಳೂರು.
9. ಶ್ರೀ.ಉತ್ತಪ್ಪ, ನಿವೃತ್ತ ಸುಬೇದಾರ್ (ಆರ್ಮಿ) ಬಿನ್ ಬಿಡ್ಡಪ್ಪ, ನಂ.423, 2ನೇ ಮುಖ್ಯ ರಸ್ತೆ, 3ನೇ ಬ್ಲಾಕ್, ಹೆಚ್.ಆರ್.ಬಿ.ಆರ್ ಬಡಾವಣೆ, ಬೆಂಗಳೂರು.
10. ಶ್ರೀ.ಎ.ಕ್ಸೇವಿಯರ್, ನಂ.95, ಡಾ॥ ರಾಜ್ ಕುಮಾರ್ ರಸ್ತೆ, ಕಮ್ಮನಹಳ್ಳಿ, ಸೇಂಟ್ ಥಾಮಸ್ ಟೌನ್ ಅಂಚೆ, ಬೆಂಗಳೂರು.
11. ಸಂಬಂಧಪಟ್ಟ ಸ್ಥಳೀಯ ಆರಕ್ಷಕ ವೃತ್ತ ನಿರೀಕ್ಷಕರು ಬಾಣಸವಾಡಿ ಪೊಲೀಸ್ ಠಾಣೆ.
12. ಸಂಬಂಧಪಟ್ಟ ಸ್ಥಳೀಯ ಸಂಚಾರಿ ವೃತ್ತ ನಿರೀಕ್ಷಕರು ಬಾಣಸವಾಡಿ ಪೊಲೀಸ್ ಠಾಣೆ.
13. ಸಂಬಂಧಪಟ್ಟ ಸ್ಥಳೀಯ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳು.

Banaswadi Police Station, Bengaluru-560 084

HC 9060
01/10/2020

Banaswadi Traffic Police Station, Bengaluru
No.
Dt. 01/10/2020

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂಖ್ಯೆ.29 ಕಾಚರಕನಹಳ್ಳಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಛೇರಿಯ ಸಭಾಂಗಣದಲ್ಲಿ ದಿನಾಂಕ: 03-10-2020 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

**ಹಾಜರಿದ್ದ ಸದಸ್ಯರು,**

1. ಶ್ರೀ ಪ್ರಸನ್ನಕುಮಾರ್ ಪ್ರವೀಣ್ ಎ, ಅಧ್ಯಕ್ಷರು, ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು
2. ಶ್ರೀ.ಹೆಚ್.ವಿ.ಕೃಷ್ಣಾರೆಡ್ಡಿ, ಸದಸ್ಯ ಕಾರ್ಯದರ್ಶಿ ಮತ್ತು ಸಂಚಾಲಕರು
3. ಶ್ರೀ.ಹನುಮಂತಪ್ಪ, ಹಿರಿಯ ಆರೋಗ್ಯ ನಿರೀಕ್ಷಕರು ಹಾಗೂ ಸದಸ್ಯರು
4. ಶ್ರೀ.ರಾಜೇಶ್, ಕಿರಿಯ ಆರೋಗ್ಯ ನಿರೀಕ್ಷಕರು
5. ಶ್ರೀಮತಿ ಸರಸ್ವತಿ, ಸದಸ್ಯರು, ಜಲವಾಯು ವಿಹಾರ ಅಪಾರ್ಟ್‌ಮೆಂಟ್ ಓನರ್ಸ್ ಅಸೋಸಿಯೇಷನ್
6. ಶ್ರೀ ಉತ್ತಪ್ಪ, ಸದಸ್ಯರು (ಅಧ್ಯಕ್ಷರು, ಹೆಚ್.ಆರ್.ಬಿ.ಆರ್ 3ನೇ ಬ್ಲಾಕ್ ಅಸೋಸಿಯೇಷನ್)
7. ಶ್ರೀ ಪಿಳ್ಳಪ್ಪ (ಅಧ್ಯಕ್ಷರು, ರಾಮಯ್ಯ ಬಡಾವಣೆ ನಿವಾಸಿಗಳ ಸಂಘ)

**ಹಾಜರಿದ್ದ ಅಧಿಕಾರಿಗಳು**

1. ಶ್ರೀ.ರಾಜಶೇಖರ್, ಕಂದಾಯ ಪರಿವೀಕ್ಷಕರು.
2. ಶ್ರೀ ಶ್ರೀನಿವಾಸ್, ಕರ ವಸೂಲಿಗಾರರು, ಕಂದಾಯ ವಿಭಾಗ
3. ಶ್ರೀ.ಅಶೋಕ್, ಸಹಾಯಕ ಅಭಿಯಂತರರು, ಬೆಸ್ಕಾಂ
4. ಶ್ರೀ ವೆಂಕಟೇಶ್ ಆಚಾರ್, ಸಹಾಯಕ ಅಭಿಯಂತರರು, ಬೆಸ್ಕಾಂ
5. ಶ್ರೀಮತಿ ಶೈಲಜಾ, ಕಲ್ಯಾಣಾಧಿಕಾರಿಗಳು, ಪೂರ್ವ ವಲಯ
6. ಶ್ರೀ.ದವಲ್, ಸಹಾಯಕ ಅಭಿಯಂತರರು, (ಬಿ.ಡಬ್ಲ್ಯೂ.ಎಸ್.ಎಸ್.ಬಿ)
7. ಶ್ರೀ.ನಾರಾಯಣಸ್ವಾಮಿ, ಸಂಚಾರಿ ಪೊಲೀಸ್ ಇನ್ಸ್‌ಪೆಕ್ಟರ್, ಬಾಣಸವಾಡಿ ಪೊಲೀಸ್ ಠಾಣೆ.
8. ಶ್ರೀ ವೆಂಕಟಸ್ವಾಮಿ, ತೋಟಗಾರಿಕಾ ನಿರೀಕ್ಷಕರು
9. ಶ್ರೀಮತಿ ಸುಮ (ವೈದ್ಯಾಧಿಕಾರಿಗಳ ಕಛೇರಿ ಸಿಬ್ಬಂದಿ)
10. ಶ್ರೀಮತಿ ರಾಜೇಶ್ವರಿ, ಕಲ್ಯಾಣ ಇಲಾಖೆ

ಈ ಸಭೆಗೆ ಹಾಜರಾಗಿದ್ದ ಮೇಲ್ಕಂಡ ಅಧ್ಯಕ್ಷರು (ನೋಡೆಲ್ ಅಧಿಕಾರಿ) ಹಾಗೂ ಅಧಿಕಾರಿಗಳನ್ನು ವಾರ್ಡ್‌ನ ಸದಸ್ಯ ಕಾರ್ಯದರ್ಶಿ ಹಾಗೂ ಸಂಚಾಲಕರು ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

1) ಶ್ರೀ ಉತ್ತಪ್ಪ, (ಅಧ್ಯಕ್ಷರು, ಹೆಚ್.ಆರ್.ಬಿ.ಆರ್ 3ನೇ ಬ್ಲಾಕ್ ಅಸೋಸಿಯೇಷನ್) ರವರು ಮಾತನಾಡಿ, ವಾರ್ಡಿನ ಹೆಚ್.ಆರ್.ಬಿ.ಆರ್ ಬಡಾವಣೆ 3ನೇ ಬ್ಲಾಕ್‌ನಲ್ಲಿ 4ನೇ ಎ ಅಡ್ಡರಸ್ತೆ ಮತ್ತು 4ನೇ ಸಿ, 4ನೇ ಡಿ ಅಡ್ಡರಸ್ತೆ ಮತ್ತು 2ನೇ ಮುಖ್ಯರಸ್ತೆಯಲ್ಲಿ ಹಲವಾರು ತಿಂಗಳುಗಳಿಂದ ಶಾಶ್ವತವಾಗಿ ನಿಲುಗಡೆ ಮಾಡಿರುವ ಕಾರುಗಳು ಹಾಗೂ ಆಟೋಗಳಿದ್ದು, ಇದರಿಂದ ಸ್ಥಳೀಯ ಸಾರ್ವಜನಿಕರಿಗೆ ಓಡಾಡಲು ಹಾಗೂ ವಾಹನ ಸಂಚಾರಕ್ಕೆ ಅಡಚಣೆಯಾಗಿರುತ್ತದೆ ಎಂದು ಸಭಾ ಗಮನಕ್ಕೆ ತಂದಾಗ ಮಾನ್ಯ ಅಧ್ಯಕ್ಷರು ಮಾತನಾಡಿ, ನಿರಂತರವಾಗಿ ನಿಲ್ಲಿಸಿರುವ ವಾಹನಗಳ ಮಾಲೀಕತ್ವವನ್ನು ಪರಿಶೀಲಿಸಿ, ಅವರಿಗೆ ನೋಟೀಸ್ ನೀಡುವ ಮೂಲಕ ತೆರವುಗೊಳಿಸಲು ಸಭೆಯಲ್ಲಿ ಹಾಜರಿದ್ದ ಪೊಲೀಸ್ ಅಧಿಕಾರಿಗಳಿಗೆ ಸಭೆಯು ಸರ್ವಾನುಮತದಿಂದ ಆದೇಶಿಸಿತು. ನಂತರ ಕೋವಿಡ್-19 ಬಗ್ಗೆ ಪ್ರಸ್ತಾಪವಾಗಿ ಪ್ರಸ್ತುತ ವಾರ್ಡ್ ಪ್ರದೇಶದಲ್ಲಿ ಒಟ್ಟು 320 ಸೋಂಕಿತ ಪ್ರಕರಣಗಳಿದ್ದು, ಈ ಪೈಕಿ 147 ಹೋಂ ಐಸೋಲೇಷನ್ ಪೂರ್ಣಗೊಂಡಿರುತ್ತದೆ. 93 ಪ್ರಕರಣಗಳು ಆಸ್ಪತ್ರೆಯಿಂದ ಬಿಡುಗಡೆಯಾಗಿರುತ್ತದೆ. 15 ಜನ ಮರಣ ಹೊಂದಿರುತ್ತಾರೆ. 65 ಸಕ್ರಿಯ ಪ್ರಕರಣಗಳಿರುವುದಾಗಿ ವೈದ್ಯಾಧಿಕಾರಿಗಳ ಸಹಾಯಕರಿಂದ ಮಾಹಿತಿ ಪಡೆಯಲಾಯಿತು.

2) ಶ್ರೀಮತಿ ಸರಸ್ವತಿ ಸದಸ್ಯರು ಮಾತನಾಡಿ, ಸುಖ್‌ಸಾಗರ್ ರಸ್ತೆಯು ವಾಣಿಜ್ಯ ರಸ್ತೆಯಾಗಿದ್ದು, ಈ ರಸ್ತೆಯಲ್ಲಿ ವಿವಿಧ ರೀತಿಯ ವಾಹನಗಳು ರಸ್ತೆಯ ಎರಡೂ ಬದಿಯಲ್ಲಿ ನಿಲುಗಡೆ ಮಾಡುತ್ತಿದ್ದು, ಇದರಿಂದ ವಾಣಿಜ್ಯ ಚಟುವಟಿಕೆಗಳಿಗಾಗಿ ಆಗಮಿಸುವ ಸಾರ್ವಜನಿಕರಿಗೆ ಹಾಗೂ ರಸ್ತೆಯಲ್ಲಿ ಸಂಚರಿಸುವ ವಾಹನಗಳಿಗೆ ಹಾಗೂ ಪಾದಾಚಾರಿ ಮಾರ್ಗದಲ್ಲಿ ಓಡಾಡುವ ಹಿರಿಯ ನಾಗರೀಕರಿಗೆ ತುಂಬಾ ತೊಂದರೆಯಾಗಿರುತ್ತದೆ ಎಂದು ಸಭಾ ಗಮನಕ್ಕೆ ತಂದಾಗ ಶ್ರೀ ಪಿಳ್ಳಪ್ಪ (ಅಧ್ಯಕ್ಷರು, ರಾಮಯ್ಯ ಬಡಾವಣೆ ನಿವಾಸಿಗಳ ಸಂಘ) ರವರು ಸಹ ಮಾತನಾಡಿ ರಾಮಯ್ಯ ಬಡಾವಣೆ 2ನೇ ಐ ಮುಖ್ಯರಸ್ತೆಯಲ್ಲಿಯೂ ಸಹ ಹಳೆಯ ಕಾರುಗಳನ್ನು ನಿಲುಗಡೆ ಮಾಡಿರುತ್ತಾರೆ ಎಂದು ಸಭೆಯಲ್ಲಿ ವಿವರವಾಗಿ ಚರ್ಚಿಸಿ, ಸುಖ್‌ಸಾಗರ್ ರಸ್ತೆಯಲ್ಲಿ ಪರಿಶೀಲಿಸಿ, ವಾಹನ ನಿಲುಗಡೆಯನ್ನು ರಸ್ತೆಯ ಒಂದು ಕಡೆಗೆ ನಿಲುಗಡೆ ಮಾಡುವಂತೆ ಹಾಗೂ ಸದರಿ ರಸ್ತೆಯಲ್ಲಿರುವ ಜಿಯೋ ಟ್ರ್ಯಾವಲ್ಸ್ ರವರಿಗೆ ಪತ್ರವನ್ನು ಬರೆದು ಕ್ರಮ ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಪೊಲೀಸ್ ಅಧಿಕಾರಿಗಳಿಗೆ ಸಭೆಯು ಸರ್ವಾನುಮತದಿಂದ ಆದೇಶಿಸಿತು.

3) ಶ್ರೀ ಪಿಳ್ಳಪ್ಪ (ಅಧ್ಯಕ್ಷರು, ರಾಮಯ್ಯ ಬಡಾವಣೆ ನಿವಾಸಿಗಳ ಸಂಘ) ರವರು ಮಾತನಾಡಿ ರಾಮಯ್ಯ ಬಡಾವಣೆಯಲ್ಲಿ ವಿದ್ಯುತ್ ನಿಲುಗಡೆ (Power Cut) ನಿರಂತರವಾಗಿ ನಡೆಯುತ್ತಿರುತ್ತದೆ ಮತ್ತು ಬೆಸ್ಕಾಂ ರವರು ವಿದ್ಯುತ್ ತಂತಿಗಳ ಕೆಳಗೆ ಮರಗಳ ಕೊಂಬೆಗಳನ್ನು ಯದ್ವಾ ತದ್ವ ಕತ್ತರಿಸಿ, ಸ್ಥಳದಲ್ಲೇ ಬಿಟ್ಟಿರುತ್ತಾರೆ ಇದನ್ನು ಸಾಗಾಣಿಕೆ ಮಾಡುತ್ತಿರುವುದಿಲ್ಲ ಈ ಬಗ್ಗೆ ಸಭಾ ಗಮನಕ್ಕೆ ತಂದಾಗ ಸಭೆಯಲ್ಲಿ ಚರ್ಚಿಸಿ, ಇನ್ನು ಮುಂದೆ ವಿದ್ಯುತ್ ನಿಲುಗಡೆ (Power Cut) ಮಾಡಬೇಕಾದಲ್ಲಿ ಪೂರ್ವ ನಿಯೋಜಿತವಾಗಿ ಸ್ಥಳೀಯರ ಗಮನಕ್ಕೆ ತಂದು ವಿದ್ಯುತ್ ನಿಲುಗಡೆ ಮಾಡಲು ಮತ್ತು ವಿದ್ಯುತ್ ತಂತಿಗಳ ಕೆಳಗೆ ಕತ್ತರಿಸಿದ ಮರಗಳ ಕೊಂಬೆಗಳನ್ನು ತ್ವರಿತವಾಗಿ ತೆರವುಗೊಳಿಸಲು ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಇಂಜಿನಿಯರ್ ರವರಿಗೆ ಕ್ರಮ ಕೈಗೊಳ್ಳಲು ಸಭೆಯು ಸರ್ವಾನುಮತದಿಂದ ಆದೇಶಿಸಿತು.

4) ಶ್ರೀ ಉತ್ತಪ್ಪ, (ಅಧ್ಯಕ್ಷರು, ಹೆಚ್.ಆರ್.ಬಿ.ಆರ್ 3ನೇ ಬ್ಲಾಕ್ ಅಸೋಸಿಯೇಷನ್) ರವರು ಮಾತನಾಡಿ, ವಾರ್ಡ್ ಪ್ರದೇಶದಲ್ಲಿ ಎಲ್ಲಾ ರಸ್ತೆಗಳಿಗೂ ಡಾಂಬರೀಕರಣ ಹಾಗೂ ಸಿಮೆಂಟ್ ಕಾಂಕ್ರೀಟ್ ರಸ್ತೆಗಳನ್ನು ನಿರ್ಮಾಣ ಮಾಡಿದ್ದು ಹೆಮ್ಮೆಯ ವಿಷಯವಾಗಿರುತ್ತದೆ. ಆದರೆ ಕೆಲವು ಕಡೆ ರಸ್ತೆಗಳಿಗೆ ಹಂಪ್‌ಗಳು ಇಲ್ಲದೇ ವಾಹನ ಸವಾರರು ವೇಗವಾಗಿ ಸಂಚರಿಸಿ, ಅಪಘಾತಗಳಾಗುವ ಸಂಭವವಿರುತ್ತದೆ. ಆದ್ದರಿಂದ ಅವಶ್ಯವಿರುವ ಕಡೆಗಳಲ್ಲಿ ರಸ್ತೆಯ ಹಂಪ್‌ಗಳನ್ನು (Road Humps) ಅಳವಡಿಸಲು ಸಭೆಯ ಗಮನಕ್ಕೆ ತಂದಾಗ, ಸಭೆಯಲ್ಲಿ ಚರ್ಚಿಸಿ, ವಾರ್ಡ್ ಪ್ರದೇಶದಲ್ಲಿ ಪರಿಶೀಲಿಸಿ ಅವಶ್ಯವಿರುವ ಕಡೆ ವೈಜ್ಞಾನಿಕವಾಗಿ ರಸ್ತೆ ಹಂಪ್‌ಗಳನ್ನು ಅಳವಡಿಸಲು Traffic Engineering Cell ರವರಿಗೆ ಪತ್ರ ಬರೆಯಲು ಸಭೆಯು ಸರ್ವಾನುಮತದಿಂದ ಆದೇಶಿಸಿತು.

5) ಶ್ರೀ ಪಿಳ್ಳಪ್ಪ (ಅಧ್ಯಕ್ಷರು, ರಾಮಯ್ಯ ಬಡಾವಣೆ ನಿವಾಸಿಗಳ ಸಂಘ) ರವರು ಮಾತನಾಡಿ ರಾಮಯ್ಯ ಬಡಾವಣೆ ಮತ್ತು ಚಿನ್ನಪ್ಪ ಬಡಾವಣೆ, 4ನೇ ಅಡ್ಡರಸ್ತೆಯಲ್ಲಿ ಬೀದಿ ದೀಪಗಳು ಉರಿಯುತ್ತಿರುವುದಿಲ್ಲ ಎಂದು ಸಭಾ ಗಮನಕ್ಕೆ ತಂದಾಗ ಸಭೆಯಲ್ಲಿ ಚರ್ಚಿಸಿ, ಸಭೆಯಲ್ಲಿ ಹಾಜರಿದ್ದ ಬೀದಿ ದೀಪಗಳ ದುರಸ್ತಿಪಡಿಸುವ ಗುತ್ತಿಗೆದಾರರಿಗೆ ಕೂಡಲೇ ವಿದ್ಯುತ್ ದೀಪಗಳನ್ನು ದುರಸ್ತಿಪಡಿಸಲು ಹಾಗೂ ಮುಂದಿನ ವಾರದಲ್ಲಿ ಸಂಜೆ ವಾರ್ಡ್ ಪ್ರದೇಶದಲ್ಲಿ ಸಂಚರಿಸಿ, ವಿದ್ಯುತ್ ದೀಪಗಳು ಉರಿಯದೇ ಇರುವ ಸ್ಥಳಗಳನ್ನು ಗುರುತಿಸಿ, ಕೂಡಲೇ ದುರಸ್ತಿ ಕೈಗೊಳ್ಳಲು ಸಭೆಯು ಸರ್ವಾನುಮತದಿಂದ ಬೀದಿ ದೀಪಗಳ ವಿಭಾಗದ ಇಂಜಿನಿಯರ್ ರವರಿಗೆ ಆದೇಶಿಸಲಾಯಿತು.

6) ಶ್ರೀ ಉತ್ತಪ್ಪ, (ಅಧ್ಯಕ್ಷರು, ಹೆಚ್.ಆರ್.ಬಿ.ಆರ್ 3ನೇ ಬ್ಲಾಕ್ ಅಸೋಸಿಯೇಷನ್) ರವರು ಮಾತನಾಡಿ, ವಾರ್ಡ್ ಪ್ರದೇಶದ ಅನೇಕ ರಸ್ತೆಗಳಲ್ಲಿ ರಸ್ತೆಗಳ ಮರಗಳಲ್ಲಿ ಮತ್ತು ಕಂಬಗಳಲ್ಲಿ ವಿವಿಧ ರೀತಿಯ

ಕೇಬಲ್‌ಗಳು ನೇತಾಡುತ್ತಿದ್ದು, ಹಿರಿಯ ನಾಗರೀಕರು ಪಾದಾಚಾರಿ ಮಾರ್ಗದಲ್ಲಿ ಓಡಾಡುವಾಗ ಇದರಿಂದ ತೊಂದರೆಯಾಗುತ್ತದೆ. ಆದ್ದರಿಂದ ಇದರ ಬಗ್ಗೆ ಕ್ರಮ ಕೈಗೊಳ್ಳಲು ಸಭಾ ಗಮನಕ್ಕೆ ತಂದಾಗ ಈ ಬಗ್ಗೆ ಚರ್ಚಿಸಿ, ಮಾನ್ಯ ಅಧ್ಯಕ್ಷರು ಮಾತನಾಡಿ, ಇಂಜಿನಿಯರಿಂಗ್, ಆರೋಗ್ಯ, ಪೊಲೀಸ್ ಇಲಾಖೆ ರವರ ಸಮನ್ವಯದೊಂದಿಗೆ ರಸ್ತೆಗಳಲ್ಲಿ ಕೇಬಲ್ ತೆರವು ಕಾರ್ಯಾಚರಣೆಯನ್ನು ಕೈಗೊಳ್ಳಲು ಸಭೆಯು ಸರ್ವಾನುಮತದಿಂದ ಆದೇಶಿಸಿತು.

7) ಶ್ರೀ ಪಿಳ್ಳಪ್ಪ (ಅಧ್ಯಕ್ಷರು, ರಾಮಯ್ಯ ಬಡಾವಣೆ ನಿವಾಸಿಗಳ ಸಂಘ) ರವರು ಮಾತನಾಡಿ ನೀರು ಸರಬರಾಜು ಆಯಿಲ್ ಮಿಲ್ ರಸ್ತೆ ಹಾಗೂ ಇತರೆ ಪ್ರದೇಶಗಳಲ್ಲಿ ವಾರಕ್ಕೆ ಮೂರು ದಿನ ಸರಬರಾಜು ಮಾಡುತ್ತಿದ್ದು, ಸರಬರಾಜು ಮಾಡುತ್ತಿರುವ ಅವಧಿ ಸಾಕಾಗುತ್ತಿಲ್ಲ ಆದ್ದರಿಂದ ಅವಧಿಯನ್ನು ವಿಸ್ತರಿಸಲು ಹಾಗೂ ವಾರ್ಡ್ ಪ್ರದೇಶದಲ್ಲಿ ಮ್ಯಾನ್‌ಹೋಲ್ ಚೇಂಬರ್‌ಗಳು ರಸ್ತೆಯ ಮಟ್ಟಕ್ಕೆ ತಗ್ಗಾಗಿರುವ ಕಡೆ ಅವುಗಳನ್ನು ಎತ್ತರಕ್ಕೆ ವಿಸ್ತರಿಸಲು ಸಭಾ ಗಮನಕ್ಕೆ ತಂದಾಗ ಸಭೆಯಲ್ಲಿ ಚರ್ಚಿಸಿ, ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಬಿಡಬ್ಲ್ಯೂಎಸ್.ಎಸ್.ಬಿ ಅಧಿಕಾರಿಗಳಿಗೆ ಸಭೆಯು ಸರ್ವಾನುಮತದಿಂದ ಆದೇಶಿಸಿತು.

ಕೊನೆಯದಾಗಿ ಮಾನ್ಯ ಅಧ್ಯಕ್ಷರು ಮಾತನಾಡಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ನಿರ್ಣಯಗಳ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

Prasanna Kumar A
7/10/2020.

ವಾರ್ಡ್ ಸಮಿತಿ ಸದಸ್ಯ ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ.29, ಕಾಚರಕನಹಳ್ಳಿ

ಅಧ್ಯಕ್ಷರು
(ನೋಡೆಲ್ ಅಧಿಕಾರಿಗಳು)
ವಾರ್ಡ್ ಸಂಖ್ಯೆ.29, ಕಾಚರಕನಹಳ್ಳಿ

***ಪ್ರತಿಯನ್ನು***

1) ವಲಯ ವಿಶೇಷ ಆಯುಕ್ತರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮುಖ್ಯ ಅಭಿಯಂತರರು (ಪೂ) ರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗಾಗಿ.
5) ವಾರ್ಡ್ ಕಮಿಟಿಯ ಸದಸ್ಯರಿಗೆ.
6) ಕಛೇರಿ ಕಡತಕ್ಕೆ.

15/10/2020 15/10/2020

15/10/2020